# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಕೆ.ಜಿ.ಮಂಜಪ್ಪ, ಸಹಾಯಕ ಕೃಷಿ ನಿರ್ದೇಶಕರು, (ನಿವೃತ್ತ) ಜಂಟಿ ಕೃಷಿ ನಿರ್ದೇಶಕರ ಕಛೇರಿ, ಹಾಸನ ರವರ ವಿರುದ್ಧ ದೂರು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 93 ಕೃಪವಿ 2009, ದಿನಾಂಕ: 10-12-2009
2. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 93 ಕೃಪವಿ 2009, ದಿನಾಂಕ: 10-06-2010
3. ಸಿಬ್ಬಂದಿ-1/ವಿಚಾರಣೆ-2/10/2009-10, ದಿನಾಂಕ: 01-02-2011.

**ಪ್ರಸ್ತಾವನೆ:-**

ಶ್ರೀ ಕೆ.ಜಿ.ಮಂಜಪ್ಪ, ಸಹಾಯಕ ಕೃಷಿ ನಿರ್ದೇಶಕರು, ಇವರು ಜಂಟಿ ಕೃಷಿ ನಿರ್ದೇಶಕರ ಕಛೇರಿ, ಹಾಸನ ಇಲ್ಲಿ ವಿಷಯ ತಜ್ಞರಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಸದರಿ ಜಿಲ್ಲೆಯ ರಸಗೊಬ್ಬರ ಮಾರಾಟಗಾರರಿಗೆ ಮತ್ತು ಜಿಲ್ಲೆಯ ರೈತರಿಗೆ ಬೇಕಾದ ರಸಗೊಬ್ಬರ ಮತ್ತು ಕೀಟನಾಶಕ ಇತ್ಯಾದಿಗಳನ್ನು ಪೂರೈಸುವಲ್ಲಿ ಅನಗತ್ಯ ತೊಂದರೆಗಳನ್ನು ನೀಡಿರುತ್ತಾರೆಂದು ಮತ್ತು ಅವರ ಕಾರ್ಯವೈಖರಿಯು ಸರಿಯಾಗಿರುವುದಿಲ್ಲವೆಂದು ಅಲ್ಲಿನ ಸ್ಥಳೀಯ ಶಾಸಕರು ಮತ್ತು ಕೃಷಿ ಪರಿಕರ ಮಾರಾಟಗಾರರ ಸಂಘ, ಇವರು ಸಲ್ಲಿಸಿರುವ ದೂರಿನ ಮೇರೆಗೆ ಅವರನ್ನು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 10-12-2009ರ ಸರ್ಕಾರದ ಆದೇಶದಲ್ಲಿ ಅಮಾನತ್ತಿನಲ್ಲಿರಿಸಲಾಗಿತ್ತು. ತದನಂತರ ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ದಿನಾಂಕ: 10-06-2010ರ ಸರ್ಕಾರದ ಆದೇಶದಲ್ಲಿ ಅಮಾನತ್ತನ್ನು ತೆರವುಗೊಳಿಸಿ ಇವರಿಗೆ ಸಹಾಯಕ ಕೃಷಿ ನಿರ್ದೇಶಕರು, ಜಂಟಿ ಕೃಷಿ ನಿರ್ದೇಶಕರ ಕಛೇರಿ, ಮಡಿಕೇರಿ ಇಲ್ಲಿಗೆ ನೇಮಿಸಲಾಗಿತ್ತು. ತದನಂತರ ಸದರಿಯವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಅವರನ್ನು ಶಿಸ್ತುಕ್ರಮಕ್ಕೆ ಗುರಿಪಡಿಸಲು ಪ್ರಸ್ತಾವನೆಯನ್ನು/ವರದಿಯನ್ನು ಕಳುಹಿಸಿಕೊಡುವಂತೆ ಕೃಷಿ ಆಯುಕ್ತರನ್ನು ಕೋರಲಾಗಿದ್ದು, ಅವರು ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ದಿನಾಂಕ: 01-02-2011ರ ಪತ್ರದಲ್ಲಿ ತಮ್ಮ ವರದಿಯನ್ನು ನೀಡಿರುತ್ತಾರೆ. ಅದರಂತೆ ಅವರ ಮೇಲಿನ ದೂರಿನ ಬಗ್ಗೆ ಜಂಟಿ ಕೃಷಿ ನಿರ್ದೇಶಕರಿಂದ ತನಿಖೆ ನಡೆಸಲಾಗಿದ್ದು, ಅವರು ನೀಡಿದ ತನಿಖಾ ವರದಿಯಲ್ಲಿ ಈ ಕೆಳಕಂಡಂತೆ ವರದಿ ನೀಡಿರುತ್ತಾರೆಂದು ತಿಳಿಸಿದ್ದಾರೆ.

ದೂರು ನೀಡಿದ ಹಾಸನ ಜಿಲ್ಲೆ ಕೃಷಿ ಪರಿಕರಗಳು ಮಾರಾಟಗಾರರ ಸಂಘ, ಹಾಸನ. ಇವರು ಸದರಿ ಅಧಿಕಾರಿಗಳು ಕಾನೂನಿನ ಅಂಶಗಳನ್ನು ವರ್ತಕರಿಗೆ ಅರಿವುಂಟುಮಾಡುವ ಸಂದರ್ಭದಲ್ಲಿ ತಾಳ್ಮೆಯಿಂದ ವರ್ತಿಸಲು ತಿಳಿ ಹೇಳಿ ಪ್ರಕರಣವನ್ನು ಮುಕ್ತಾಯಗೊಳಿಸಲು ಹಾಜರಿದ್ದ ಸದಸ್ಯರೆಲ್ಲರೂ

(31)

ಒಪ್ಪಿ ಹೇಳಿಕೆಗೆ ಸಹಿ ಹಾಕಿರುತ್ತಾರೆಂದು ಹಾಗೂ ವ್ಯವಸಾಯೇತರ ಪರಿಕರ ಸಂಘ ಇವರಿಗೆ ದೂರನ್ನು ಸಮರ್ಥಿಸಲು ಸಾಕಷ್ಟು ಸಮಯಾವಕಾಶ ನೀಡಿದರೂ ಸಹ ತನಿಖೆಗೆ ಗೈರು ಹಾಜರಿ ಆಗುವ ಮೂಲಕ ದೂರನ್ನು ಸಮರ್ಥಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಸದರಿಯವರ ಮೇಲಿನ ದೂರುಗಳಲ್ಲಿ ಹುರುಳಿಲ್ಲದ ಕಾರಣ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಸರ್ಕಾರವು ಕೃಷಿ ಆಯುಕ್ತರ ಶಿಫಾರಸ್ಸನ್ನು ಒಪ್ಪಿ, ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 93 ಕೃಪವಿ 2009**
**ಬೆಂಗಳೂರು, ದಿನಾಂಕ:20-08-2011**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಕೆ.ಜಿ.ಮಂಜಪ್ಪ, ಸಹಾಯಕ ಕೃಷಿ ನಿರ್ದೇಶಕರು, (ನಿವೃತ್ತ) ಜಂಟಿ ಕೃಷಿ ನಿರ್ದೇಶಕರ ಕಛೇರಿ, ಹಾಸನ. ಇವರ ಮೇಲಿನ ಆರೋಪಗಳಲ್ಲಿ ಹುರುಳಿಲ್ಲದ ಕಾರಣ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ. ಹಾಗೂ ಸದರಿಯವರನ್ನು ಈ ಪ್ರಕರಣದಲ್ಲಿ ಅಮಾನತ್ತಿನಲ್ಲಿರಿಸಿದ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ ನಿಯಮ 100(3)ರನ್ವಯ ಕರ್ತವ್ಯದ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು.
2. ಆಯುಕ್ತರು ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಜಂಟಿ ಕೃಷಿ ನಿರ್ದೇಶಕರು, ಹಾಸನ/ಕೊಡಗು.
4. ಸಂಬಂಧಪಟ್ಟ ಅಧಿಕಾರಿಗೆ (ಆಯುಕ್ತರು, ಕೃಷಿ ಇಲಾಖೆ, ಇವರ ಮುಖಾಂತರ).
5. ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.